ಶಾಶ್ವತ ಪರಿಹಾರದ ಬಗ್ಗೆ ನಿಮ್ಮ ಅಂಕಿಅಂಶಗಳಲ್ಲಿ ಒಂದು ಹೊಸ ಯೋಜನೆಯನ್ನು ಮಾಡುತ್ತೇವೆ ಎಂಬ ವಿಚಾರವನ್ನು ಹೇಳಲಿಲ್ಲ. ಇದರ ಜೊತೆಗೆ ಆ ಜಮೀನುಗಳನ್ನು ಪಡೆದಿರಲ್ಲ ಕಾರಂಜ ಮತ್ತು ಚುಳ್ಕಿನಾಲಾ ಅದು ನಿಮಗೆ ಬರುವುದಿಲ್ಲ, ಆದರೂ ರೈತರ ಬೇಡಿಕೆ ಏನು ಇದೆ ಅದು ಸಮಗ್ರವಾಗಿದೆ. ಅವರಿಗೆ ಪರಿಹಾರವನ್ನು ಕೊಡುವುದರಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಆದುದರಿಂದ ಇವ್ವೊತ್ತು ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ಈ ಅಸಾಧಾರಣವಾದಂಥ ಪ್ರಕರಣ ಏನು ಇದೆ, ಈ ಬಗ್ಗೆ ಒಂದು ಸಮಗ್ರವಾದ ನ್ಯಾಯಾಂಗ ತನಿಖೆಯಾಗಬೇಕು ಮತ್ತು ಸದನಸಮಿತಿಯನ್ನು ರಚನೆ ಮಾಡಬೇಕೆಂದು ಒತ್ತಾಯ ಮಾಡಿ ನಾನು ಧರಣಿ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಸಭಾಧ್ಯಕ್ಷರೇ, ಸದನಸಮಿತಿಯನ್ನು ರಚನೆ ಮಾಡಲಿಕ್ಕೆ ಒಪ್ಪದೆ ವಿರೋಧವನ್ನು ಮಾಡುತ್ತಿದ್ದಾರೆ ಮತ್ತು ನಾವು ಕೇಳಿದಂಥ ಯಾವುದೇ ಪ್ರಶ್ನೆಗೆ ಭೈರೇಗೌಡರು ಉತ್ತರವನ್ನು ಹೇಳಲಿಲ್ಲ. ಅಲ್ಲಿ ಸತ್ತಿರತಕ್ಕಂತಹವರು ಬೇರೆ ಕಾರಣಕ್ಕಾಗಿ ಸತ್ತಿದ್ದಾರೆ ಎಂದು ಹೇಳುತ್ತಾರೆ ಆದರೆ ಸತ್ತಿರತಕ್ಕಂತಹವರ ಬೆಳೆ ಹಾನಿಯಾಗಿದೆಯೆ ಇಲ್ಲವೆ ಎಂದು ಹೇಳಲಿಲ್ಲ. ಹಾಗಾಗಿ ನಾನೂ ಕೂಡ ಇದನ್ನು ಪ್ರತಿಭಟನೆ ಮಾಡಿ ಧರಣಿ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜಿ.ವಿ.ಶ್ರೀರಾಮರೆಡ್ಡಿ ಯವರು ಸದನದ ಬಾವಿಯಲ್ಲಿ ಧರಣಿ ಕುಳಿತರು)

ಅಧ್ಯಕ್ಷರು: ಸನ್ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಶ್ರೀರಾಂರೆಡ್ಡಿಯವರು ತಮ್ಮ ಸ್ವಸ್ಥಾನಕ್ಕೆ ಹಿಂದಿರುಗಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಏಕೆಂದರೆ ಮುಂದಿನ ಕಲಾಪವನ್ನು ನಡೆಸೋಣ. ಕಲಾಪವನ್ನು ನಡೆಸುವ ವೇಳೆ ತಾವು ಅಲ್ಲಿ ಕುಳಿತುಕೊಂಡರೆ ಚೆನ್ನಾಗಿ ಕಾಣುವುದಿಲ್ಲ. ಭೈರೇಗೌಡರೂ ಸಹ ತಮ್ಮ ಹಿತೈಷಿಗಳಿದ್ದಾರೆ. ಅವರು ಅದನ್ನು ಸರಿ ಮಾಡುತ್ತಾರೆ. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ಹಾಗೆ ವಂದನಾರ್ಪಣಾ ಪ್ರಸ್ತಾವ.

(9) ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣೆ ಪ್ರಸ್ತಾವ

ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸುತ್ತೇನೆ.

''9ನೇ ಮಾರ್ಚ್ 1998ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯು

ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.''

ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್ (ಗೋಕಾಕ್): ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು:

(10) ರಾಜ್ಯ ಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣ ಪ್ರಸ್ತಾವದ ಚರ್ಚೆ

+ ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ಮಾನ್ಯ ಸಭಾಧ್ಯಕ್ಷರೇ, ನಾವು 12ನೆಯ ಲೋಕಸಭೆಯ ಚುನಾವಣೆಯ ನಂತರ ಈ ಒಂದು ವಿಧಾನಸಭೆಯನ್ನು ಕರೆದಿದ್ದೇವೆ. ಈ ಚುನಾವಣೆಯಲ್ಲಿ ಅನೇಕ ರಾಜಕೀಯ ಬೆಳವಣಿಗೆಗಳನ್ನು ನಾವು ನೋಡಿದ್ದೇವೆ. ನಮಗೆಲ್ಲಾ ಗೊತ್ತಿರುವ ಹಾಗೆ ಈ ಚುನಾವಣೆ ಯಾರಿಗೂ ಬೇಕಾಗಿರಲಿಲ್ಲ. ಆದರೂ ಸಹಿತ ಈ ಚುನಾವಣೆ ನಮ್ಮ ಮೇಲೆ ಬಂತು. ಈ ಚುನಾವಣೆಯಲ್ಲಿ ಯಾವ ಇಷ್ಯೂ ಕೂಡ ಇರಲಿಲ್ಲ. ಅಂದರೆ ಬೇರೆ ಬೇರೆ ಚುನಾವಣೆಗಳಲ್ಲಿ ಒಂದಲ್ಲ ಒಂದು ಇಷ್ಯೂ ಇರುತ್ತಿತ್ತು. ಆದರೂ ಅನಿವಾರ್ಯವಾಗಿ ನಾವು ಚುನಾವಣೆಯನ್ನು ಎದುರಿಸಬೇಕಾಗಿ ಬಂತು. ಈಗ ಚುನಾವಣೆಯ ಫಲಿತಾಂಶಗಳು ಬಂದಿದೆ. ಚುನಾವಣೆಗಳ ಫಲಿತಾಂಶಗಳು ಬಂದಮೇಲೆ ಯಾವುದೇ ಒಂದು ಪಕ್ಷದಲ್ಲೂ ಸಹ ಒಂದು ಸ್ಥಿರತೆ ಬಂದಿಲ್ಲ. ಎಲ್ಲಾ ಕಡೆ ಅಸ್ಥಿರತೆ, ಎಲ್ಲಾ ನಾಯಕರಲ್ಲೂ ದುಗುಡ, ಆತಂಕ ಉಂಟಾಗಿದೆ. ಮತ್ತು ಈ ಚುನಾವಣೆಯಿಂದ ನಾವು ಮತ್ತೊಂದು ಬೆಳವಣಿಗೆಯನ್ನು ಏನು ಕಂಡಿದ್ದೇವೆ ಎಂದು ಹೇಳಿದರೆ, ಒಂದು. ಇಷ್ಯೂ ಮೇಲೆ ಇದು ನಡೆದಿಲ್ಲ, ಮತ್ತೊಂದು ವಿಚಾರ, ಈ ಚುನಾವಣೆ ನಮ್ಮ ರಾಜ್ಯದಲ್ಲಿ ತೆಗೆದುಕೊಂಡರೆ ಪಕ್ಷಾಧಾರಿತವಾಗಿ ನಡೆಯುವುದಕ್ಕೆ ಬದಲಾಗಿ ಎಷ್ಟೋ ಕಡೆ ಜಾತಿಯ ಒಂದು ವೈಷಮ್ಯ ಹೆಚ್ಚಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ನಾವೆಲ್ಲರೂ ಅನುಭವ ಪಟ್ಟಿದ್ದೇವೆ. ಪ್ರತಿ ಚುನಾವಣೆಗಳು ರಾಜಕೀಯ ಪಕ್ಷದ ಆಧಾರದಮೇಲೆ ನಡೆಯುತ್ತಿತ್ತು. ಆದರೆ ಈ ಚುನಾವಣೆಯಲ್ಲಿ ವಿಶೇಷವಾದ ಬೆಳವಣಿಗೆ ಏನು ಎಂದು ಹೇಳಿದರೆ ರಾಜಕೀಯ ಪಕ್ಷದ ಒಳಗಡೆಯೇ ಜಾತಿಯ ಬೆಳವಣಿಗೆ. ಜಾತಿಯ ಆಧಾರದಮೇಲೆ, ಗುಂಪುಗಳ ಆಧಾರದಮೇಲೆ ನಡೆದಿರತಕ್ಕಂಥ ಚುನಾವಣೆ. ಮತ್ತೆ ಮತ್ತೊಂದು ಬೆಳವಣಿಗೆ ಏನು ಎಂದು ಹೇಳಿದರೆ 1996ರಲ್ಲಿ ಮತ್ತು 1998ರ ಎರಡು ಚುನಾವಣೆಗಳಲ್ಲಿ ಈ ಕೇಂದ್ರೀಕೃತವಾಗಿದ್ದಂಥ ಅಧಿಕಾರ ಇವ್ಹೊತ್ತು ರಾಜ್ಯಗಳಿಗೆ ಹಂಚಿಹೋಗಿದೆ. ನಿಜವಾದಂಥ ಒಂದು ಒಕ್ಕೂಟದ ವ್ಯವಸ್ಥೆ ಅಂದರೆ ಫೆಡರಲ್ ಸಿಸ್ಟಂ ಎಂದು ನಾವು ಏನು ಹೇಳುತ್ತೇವೆ, ಈ ಒಕ್ಕೂಟದ ವ್ಯವಸ್ಥೆ ಈ ಎರಡು ಚುನಾವಣೆಗಳಿಂದ ಬಹಳ ಪ್ರಬಲವಾಗಿ ಹುಟ್ಟಿದೆ ಎನ್ನುವುದನ್ನು